primitive Tribe ಗೆ ಸೇರಿಸಬೇಕೆಂದು ಕೇಳಿದ್ದೇನೆ. ಅದಕ್ಕೆ ಉತ್ತರ ಸರ್ಕಾರದಿಂದ ಬಂದಿಲ್ಲ.

ಶ್ರೀ ಹೆಚ್. ಎಸ್. ಮಹದೇವಪ್ರಸಾದ್ (ಸಹಕಾರ ಸಚಿವರು): ಉತ್ತರ ಬಂದಿಲ್ಲ, ಸೋಮವಾರ ಉತ್ತರ ಒದಗಿಸುತ್ತೇವೆ.

ಅಧ್ಯಕ್ಷರು: ಆಯಿತು.

11. ವಿಷಯ: ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ನಲವಾಗಿಲು ಗ್ರಾಮವನ್ನು ಸ್ಥಳಾಂತರಿಸುವ ಬಗ್ಗೆ.

ಶ್ರೀ. ಕೆ. ಬಿ. ಕೋಳಿವಾಡ್ (ರಾಣೆಬೆನ್ನೂರು): ಮಾನ್ಯ ಅಧ್ಯಕ್ಷರೆ, ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ನಲವಾಗಿಲು ಗ್ರಾಮವನ್ನು ಸ್ಥಳಾಂತರಿಸುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ರಾಣೆಬೆನ್ನೂರು ತಾಲ್ಲೂಕು ನಲವಾಗಲು ಗ್ರಾಮವು ತುಂಗಭದ್ರ ನದಿ ಪಕ್ಕದಲ್ಲಿದ್ದು, ಈ ಗ್ರಾಮದ ಪಕ್ಕದಲ್ಲಿ ಪಾಲಿಫೈಬರ್ ಕಾರ್ಖಾನೆ ಇರುತ್ತದೆ ಹೀಗಾಗಿ ಗ್ರಾಮಸ್ಥರಿಗೆ ತೊಂದರೆಯುಂಟಾಗುವುದರಿಂದ, ಸದರಿ ಗ್ರಾಮವನ್ನು ಸ್ಥಳಾಂತರಿಸಿ ಪಕ್ಕದ ಗ್ರಾಮದಲ್ಲಿನ ಒಟ್ಟು 34 ಎಕರೆ 14 ಗುಂಟೆ 10 ಅಣೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಂಡು ಅರ್ಹ ಫಲಾನುಭವಿಗಳನ್ನು ಗುರುತಿಸಿ ಪಟ್ಟಾಗಳನ್ನು ವಿತರಿಸಲಾಗಿದೆ. ಪಟ್ಟಾ ವಿತರಿಸಿದ 430 ಫಲಾನುಭವಿಗಳ ಪೈಕಿ 26 ಫಲಾನುಭವಿಗಳು ಮಾತ್ರ ತಮಗೆ ನೀಡಿದ ಜಾಗೆಯಲ್ಲಿ ಮನೆ ನಿರ್ಮಿಸಿಕೊಂಡಿರುತ್ತಾರೆ. ಈ ಹಿಂದೆ ಹರಿಹರ ಪಾಪಿಫೈಬರ್ಸ ಕಾರ್ಖಾನೆಯವರು ಹಾಗೂ ಸದರಿ ಗ್ರಾಮದ ಗ್ರಾಮಸ್ಥರು ಸರ್ಕಾರದ ಮಟ್ಟದಲ್ಲಿ ಸಭೆ ನಡೆಸಿ ಮನೆ ಕಟ್ಟಿಕೊಳ್ಳಲು ಮಾಡಲಾದ ಒಪ್ಪಂದದ ಪ್ರಕಾರ ಫಲಾನುಭವಿಗಳಿಗೆ 4 ಹಂತಗಳಲ್ಲಿ ಹಣ ಬಟವಡೆ ಮಾಡಲು ನಿರ್ಧರಿಸಿದ ಪ್ರಕಾರ ಸದರಿ ಹಣ ಸಾಕಾಗುವುದಿಲ್ಲವೆಂದು ಗ್ರಾಮಸ್ಥರು ಮೊದಲಿದ್ದ ಗ್ರಾಮದಿಂದ ಸ್ಥಳಾಂತರಗೊಂಡ ಗ್ರಾಮಕ್ಕೆ

ಸ್ಥಳಾಂತರಗೊಳ್ಳಲು ನಿರಾಕರಿಸುತ್ತಾರೆ. ಸದರಿ ಗ್ರಾಮದಲ್ಲಿ ಹೆಚ್ಚಿನ ಜನರು ಪರಿಶಿಷ್ಟ ಜಾತಿ / ಪಂಗಡದವರು ಹಾಗೂ ಆರ್ಥಿಕವಾಗಿ ದುರ್ಬಲರಿರುತ್ತಾರೆ.

ದಿನಾಂಕ: 17.10.2013 ರಂದು ಮಾನ್ಯ ಶಾಸಕರು ರಾಣೆಬೆನ್ನೂರು ಕ್ಷೇತ್ರ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನಲವಾಗಲ ಗ್ರಮದ ಸ್ಥಳಾಂತರ ಕುರಿತು ಸುದೀರ್ಘವಾಗಿ ಚರ್ಚಿಸಿ, ನಲವಾಗಲ ಗ್ರಾಮದ ಅರ್ಹ ವಸತಿ ರಹಿತ ಫಲಾನುಭವಿಗಳಿಗೆ ಅವರಿಗೆ ನೀಡಿದ ಜಾಗೆಯಲ್ಲಿ ಮನೆ ನಿರ್ಮಿಸಿ ಕೊಡಲು ವಿಶೇಷ ಪ್ರಕರಣ ಎಂದು ಪರಿಗಣಿಸಿ, ಶ್ರೀ ರಾಜೀವ ಗಾಂಧಿ ವಸತಿ ನಿಗಮ ಬೆಂಗಳೂರು ಇವರಿಗೆ ಜಿಲ್ಲಾಧಿಕಾರಿಗಳ ಮುಖಾಂತರ ಪ್ರಸ್ತಾವನೆ ಸಲ್ಲಿಸಲು ನಿರ್ಧರಿಸಿ, ದಿನಾಂಕ: 15.02.2014 ರಂದು ವ್ಯವಸ್ಥಾಪಕ ನಿರ್ದೇಶಕರು, ಶ್ರೀ ರಾಜೀವ ಗಾಂಧಿ ವಸತಿ ನಿಗಮ, ಬೆಂಗಳೂರು ಇವರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಶ್ರೀ ಕೆ. ಬಿ. ಕೋಳಿವಾಡ್: ಮಾನ್ಯ ಅಧ್ಯಕ್ಷರೆ, ನಲವಾಗಿಲು ಗ್ರಮ ಹರಿಹರ ಪಾಲಿಫೈಬರ್ಸ್‌ನ ಕೆಳಗಡೆ ಬರುವಂಥ ಗ್ರಾಮವಾಗಿದೆ. ವಾಯುಮಾಲಿನ್ಯದಿಂದ ಈ ಗ್ರಾಮವನ್ನು ಸ್ಥಳಾಂತರಿಸಬೇಕೆಂದು ಸುಮಾರು 30 ವರ್ಷಗಳ ಹಿಂದೆ ನಿರ್ಣಯ ಮಾಡಲಾಗಿತ್ತು. ಅಲ್ಲಿ ಒಂದು agreement ಆಗಿತ್ತು. ಕಂಪನಿಯವರಿಗೂ ಮತ್ತು ನಿವಾಸಿಗಳಿಗೂ, ಸರ್ಕಾರ ಎಲ್ಲ ಕೂಡಿ ಒಂದು agreement ಮಾಡಿತ್ತು. ನಿವೇಶನಗಳನ್ನು ಮತ್ತು ಮನೆಗಳನ್ನು ಕಂಪನಿಯವರೇ ಕಟ್ಟಿಕೊಡಬೇಕೆನ್ನುವಂಥ agreement ಆಗಿತ್ತು, ನಿವೇಶನ ಕೊಟ್ಟಿದ್ದಾರೆ. ಮನೆಗಳನ್ನು ಇದುವರೆಗೂ ಕಟ್ಟಲಿಕ್ಕೆ ಆಗಲಿಲ್ಲ. ಆದ್ದರಿಂದ, ನಾನು ಸನ್ಮಾನ್ಯ ಸಚಿವರಿಗೆ ಒಂದು ಸಲಹೆ ಕೊಡುತ್ತಿದ್ದೇನೆ. ತಾವು ಶೀಘ್ರ ದಲ್ಲಿಯೇ ಒಂದು ಸಭೆಯನ್ನು ಮಾಡಿ, ತಮ್ಮ ಛೇಂಬರ್‌ನಲ್ಲಿಯೇ ಹರಿಹರ ಪಾಲಿಫೈಬರ್ಸ್ನ representatives ಅನ್ನು, ಜಿಲ್ಲಾಧಿಕಾರಿಗಳನ್ನು ಹಾಗೂ ಆ local MLA ಯವರನ್ನು ಆ ಸ್ಥಳೀಯ ಮುಖಂಡರುಗಳನ್ನು ಕರೆದು ಮಾಡಿದರೆ ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಸಾಧ್ಯವಾಗುತ್ತದೆ. ಉತ್ತರದಲ್ಲಿ ಇನ್ನೊಂದು ಅಂಶ ಹೇಳಿದ್ದಾರೆ.

ಶ್ರೀ ಎ. ಶ್ರೀನಿವಾಸ ಪ್ರಸಾದ್: ಸನ್ಮಾನ್ಯ ಶಾಸಕರು ನೀಡಿರುವ ಸಲಹೆಯನ್ನು ನಾನು ಸ್ವೀಕರಿಸಿ ನನ್ನ ಛೇಂಬರ್‌ಗೆ ಕರೆಸಿ ಜಿಲ್ಲಾಧಿಕಾರಿಗಳು, ಶಾಸಕರನ್ನು ಕರೆಸಿಕೊಂಡು ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು: ಓ. ಕೆ.

ಶ್ರೀ ಕೆ. ಬಿ. ಕೋಳಿವಾಡ್: ಮಾನ್ಯ ಅಧ್ಯಕ್ಷರೆ, 2ನೇ ಪ್ಯಾರಾದಲ್ಲಿ ಏನು ಕೊಟ್ಟಿದ್ದಾರೆ,

ಅಧ್ಯಕ್ಷರು: ಬಗೆಹರಿಸುತ್ತೇವೆಂದು ಹೇಳಿದ್ದಾರಲ್ಲ ರೀ,

ಶ್ರೀ ಕೆ. ಬಿ. ಕೋಳಿವಾಡ: ಅದಲ್ಲ ಸರ್, 2ನೇ ಪ್ಯಾರಾದಲ್ಲಿ ಏನು ಉತ್ತರ ಕೊಟ್ಟಿದ್ದಾರೆ ಅದು wrong information

ಅಧ್ಯಕ್ಷರು: ಹಾಗಾದರೆ ಬೇಡ ಬಿಡಿ, ಚರ್ಚೆ ಸಾಕು.

ಶ್ರೀ ಕೆ. ಬಿ. ಕೋಳಿವಾಡ್: ಮುಸ್ತೂರು ವಿಲೇಜ್ ಬಗ್ಗೆ ಅದರಲ್ಲಿ ಉತ್ತರ ಕೊಟ್ಟಿದ್ದಾರೆ. ಎರಡೂ ವಿಷಯದ ಬಗ್ಗೆ ತಾವು ಸಭೆ ಕರೆದುಬಿಟ್ಟರೆ ಅನುಕೂಲವಾಗುತ್ತದೆ

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಓ, ಯಸ್,

12. ವಿಷಯ: ಪ್ರಾಥಮಿಕ ಶಾಲೆಯಿಂದ ಪ್ರೌಢಶಾಲೆಗೆ ಬಡ್ತಿ ಹೊಂದಿದ ಸಹ ಶಿಕ್ಷಕರುಗಳ ವೇತನದಲ್ಲಿ ಆಗುತ್ತಿರುವ ತಾರತಮ್ಯದ ಬಗ್ಗೆ.

ಶ್ರೀ ಕೆ. ಎಂ. ಶಿವಲಿಂಗೇಗೌಡ (ಅರಸೀಕೆರೆ): ಮಾನ್ಯ ಅಧ್ಯಕ್ಷರೆ, ಪ್ರಾಥಮಿಕ ಶಾಲೆಯಿಂದ ಪ್ರೌಢಶಾಲೆಗೆ ಬಡ್ತಿ ಹೊಂದಿದ ಸಹ ಶಿಕ್ಷಕರುಗಳ ವೇತನದಲ್ಲಿ ಆಗುತ್ತಿರುವ ತಾರತಮ್ಯದ ಬಗ್ಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇನೆ. ಉತ್ತರ ಬಂದಿಲ್ಲ. ಅವರು ಸೋಮವಾರ ಉತ್ತರ ಕೊಡಲಿ.

ಅಧ್ಯಕ್ಷರು: ಓ ಕೆ. ಸೋಮವಾರ ತೆಗೆದುಕೊಳ್ಳೋಣ.